ಮಾಲೀಕರ ಮೇಲೆ ಯೋಗ್ಯಕ್ರಮ ಕೈಗೊಳ್ಳುವಂತೆ ಹಾಗೂ ಸುವ್ಯವಸ್ಥಿತ ಹೋಟೆಲ್‌ಗಳನ್ನು ಇಡುವಂತೆ ಸರಕಾರದಿಂದ ಯಾವ ಆದೇಶ ನೀಡಲಾಗಿದೆ. ಮೃತ ಕುಟುಂಬದ ಸಂಬಂಧಿಕರಿಗೆ ಕೊನೆಪಕ್ಷ ೨೫ ಸಾವಿರ ರೂಪಾಯಿಗಳನ್ನು ಕೊಟ್ಟು ಮೃತ ಕುಟುಂಬದ ವಿದ್ಯಾವಂತ ನಿರುದ್ಯೋಗಿ ಜನರಿಗೆ ಸರಕಾರಿ ನೌಕರಿ ಕೊಡುವುದಕ್ಕಾಗಿ ಒತ್ತಾಯಿಸುತ್ತೇನೆ. ಹಾಗೂ ಈ ವಿಷಯದಲ್ಲಿ ಗೃಹ ಸಚಿವರಿಂದ ವಿವರವಾದ ಹೇಳಿಕೆಯನ್ನು ಕೊಡುವಂತೆ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ಉತ್ತರವನ್ನು ನಾಳೆ ತರಿಸಿಕೊಡುತ್ತೇನೆ.

ದ. ಕ, ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಮನವಿ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಯೋಜನೆಗೆ ಅವಕಾಶವಿಲ್ಲ ಎನ್ನುವ ಮನೋಭಾವ ಸರಕಾರದಲ್ಲಿ ಇದೆ. ನೀರಾವರಿ ಯೋಜನೆಗೆ ೪೦೦ ಎಕರೆಗೆ ಕೃಷಿ ಬೆಳೆಯುವ ಜಮೀನಿನ ಅಚ್ಚುಕಟ್ಟು ಮಾಹಿತಿ ಬೇಕು ಎಂಬುದು ಪದ್ಧತಿ. ಆದರೆ ೪೦೦ ಎಕ್ರೆಗಿಂತ ಜಾಸ್ತಿ ಒಂದೇ ಕಡೆ ಜಮೀನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಲ್ಲ ಎನ್ನುವ ತಪ್ಪು ಮಾಹಿತಿಯಿಂದ ನೀರಾವರಿ ಯೋಜನೆ ನಮ್ಮ ಜಿಲ್ಲೆಗೆ ಬಾರದೇ ತಮ್ಮ ರೈತರು ಈ ಯೋಜನೆಯಿಂದ ವಂಚಿತರಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯೇ ಹೆಚ್ಚಿಗೆ ಆದಾಯ ರಾಜ್ಯ ಸರಕಾರಕ್ಕೆ ಬರುತ್ತಿದ್ದು ಇಂತಹ ದೊಡ್ಡ ಯೋಜನೆ ನಮ್ಮ ಜಿಲ್ಲೆಗೆ ಬಾರದೇ ರೈತರಿಗೆ ಅನ್ಯಾಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶವಾದ ಪುತ್ತೂರು, ಸುಳ್ಯ, ಬಂಟ್ವಾಳ, ಬೆಳ್ತಂಗಡಿ ತಾಲ್ಲೂಕುಗಳು ಕೃಷಿ ಪ್ರಾಧಾನ್ಯ ತಾಲ್ಲೂಕುಗಳಾಗಿದ್ದು ಇಲ್ಲಿ ಇಂತಹ ಯೋಜನೆಗೆ ಅವಕಾಶವಿದ್ದು ಸರಕಾರದ ಇದರ ಬಗ್ಗೆ ಯೋಜನೆ ಕೈಕೊಂಡರೆ ಈ ರೀತಿಯ ತಾರತಮ್ಯ ಕಡಿಮೆಯಾಗುವುದು. ಪುತ್ತೂರು ಈ ತಾಲ್ಲೂಕಿನ ಬೆಳಿವಾಡಿ ಗ್ರಾಮದ ಕಟಾರ ಎಂಬ ಸ್ಥಳದಲ್ಲಿ ಕುಮಾರಧಾರಾ ನದಿಗೆ ಇಂತಹ ಯೋಜನೆಯನ್ನು ರೂಪಿಸಿದರೆ ಇದರಿಂದ ನೆರೆಹೊರೆಯ ಗ್ರಾಮಗಳಾದ, ಬೆಳ್ಳಿಪ್ಪಾಡಿ, ಕೋಡಿಂಬಾಡಿ ಚಿಕ್ಕ ಮೂಡ್ನೂರು, ನೆಕ್ಲೆರಾಡಿ ಗ್ರಾಮಗಳಲ್ಲಿ ಸಾಧಾರಣ ೫೦೦ ಎಕರೆಗಳವರೆಗೆ ಕೃಷಿ ಆಗುವಂಥ ಅವಕಾಶವಿದೆ. ಇದೇ ರೀತಿ ನನ್ನ ಕ್ಷೇತ್ರವಾದ ಬಂಟ್ವಾಳ ತಾಲ್ಲೂಕಿನ ಬಿಳಿಯೂರು ಗ್ರಾಮದಲ್ಲಿ ಕೂಡ ನೇತ್ರಾವತಿ ನದಿಗೆ ಈ ನೀರಾವರಿ ಯೋಜನೆಯನ್ನು ಕೈಕೊಂಡರೆ ಬಿಳಿಯೂರು, ಪೆರ್ನೆ, ಕಡೆಶ್ವಾಲ್ಯ ಗ್ರಾಮಗಳಿಗೆ ಈ ಯೋಜನೆ ಮುಖಾಂತರ ಸಾಧಾರಣ ೫೦೦ಎಕರೆ ಜಮೀನು ಕೃಷಿಯಾಗುವ ಅವಕಾಶವಿರುವುದರಿಂದ ಈ ಎರಡು ನೀರಾವರಿ ಯೋಜನೆಗಳನ್ನು ಆದ್ಯತೆ ಮೇರೆಗೆ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಆದ ಅನ್ಯಾಯವನ್ನು ನಿವಾರಿಸಿ ಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸುತ್ತೇನೆ.

ಶಾಸನ ರಚನಾ ಕಲಾಪಗಳು

೧೯೮೯ನೇ ಇಸವಿಯ ಕರ್ನಾಟಕ ಪರಿಹಾರ ಉದ್ದಿಮೆಗಳ (ವಿಶೇಷ ಉಪಬಂಧಗಳು) (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಸಚಿವರು).—(ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳ ಪರವಾಗಿ).—

"೧೯೮೯ನೇ ಇಸವಿಯ ಕರ್ನಾಟಕ ಪರಿಹಾರ ಉದ್ದಿಮೆಗಳ (ವಿಶೇಷ ಉಪಬಂಧಗಳು) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ".

ಅಧ್ಯಕ್ಷರು.—೧೯೮೯ನೇ ಇಸವಿಯ ಕರ್ನಾಟಕ ಪರಿಹಾರ ಉದ್ದಿಮೆಗಳ (ವಿಶೇಷ ಉಪಬಂಧಗಳು) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಗೌರ್ನರ್‌ನೇ ಇಸವಿಯ ಕರ್ನಾಟಕ ಪರಿಹಾರ ಉದ್ದಿಮೆಗಳ (ವಿಶೇಷ ಉಪಬಂಧಗಳು) (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ವಿಧೇಯಕವನ್ನು ಮಂಡಿಸಲಾಯಿತು

ಸರ್ಕಾರಿ ನಿರ್ಣಯ

ಪ್ರೊ. ಎ. ಲಕ್ಷ್ಮೀಸಾಗರ್.—(ಮುಖ್ಯಮಂತ್ರಿಗಳ ಪರವಾಗಿ).—I beg to move

"That this House ratifies the a mendments to the Constitution of India falling within the purview of the proviso to Clause (2) of article 368 there of proposed to be made by the Constitution 62nd Amendment Bill, 1988, as passed by the Houses of Parliament,"

ಶ್ರೀ ಎ.ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಮೂಲ ಉದ್ದೇಶ ಸಭೆಯ ಸದಸ್ಯರಿಗೆ ಗೊತ್ತಿದೆ ಎಂದು ನಾನು ಭಾವಿಸಿದ್ದೇನೆ. ಈಗಿರುವ ೨೧ ವರ್ಷದ ಪರಿಗಿರುವ ವೋಟಿನ ಹಕ್ಕನ್ನು ೧೮ ವರ್ಷಕ್ಕೆ ಇಳಿಸುವ ತಿದ್ದುಪಡಿ ಇದಾಗಿದೆ. ಬಹಳ ವರ್ಷಗಳಿಂದ ವೋಟನ್ನು ಚಲಾಯಿಸುವವರ ವಯಸ್ಸನ್ನು ೨೧ ರಿಂದ ೧೮ಕ್ಕೆ ಇಳಿಸಬೇಕೆಂದು ಹಲವಾರು ವರ್ಷಗಳಿಂದ ಭಾರತದ ಸರ್ಕಾರದ ಮೇಲೆ ಒತ್ತಾಯವಿತ್ತು. ಕೊನೆಗೆ ಕೇಂದ್ರ ಸರ್ಕಾರ ಅದಕ್ಕೆ ಮಣಿದು ವಯಸ್ಸನ್ನು ೧೮ಕ್ಕೆ ಇಳಿಸುವ ಮನಸ್ಸು ಮಾಡಿತೆಂದು ನನಗೆ ಅನಿಸುತ್ತದೆ. ಅದಕ್ಕಾಗಿ ಕೇಂದ್ರ ರಾಜ್ಯಾಂಗದ ತಿದ್ದುಪಡಿ ಮಾಡಿರುವುದನ್ನು ಅಲ್ಲಿನ ಎರಡೂ ಸದನಗಳು ಒಪ್ಪಿಗೆ ನೀಡಿವೆ. ನಮ್ಮ ರಾಜ್ಯಾಂಗದ ಪ್ರಕಾರ ಅದಕ್ಕೆ ನಮ್ಮ ರಾಜ್ಯದ ವಿಧಾನ ಮಂಡಲ ಅನುಮೋದನೆ ನೀಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಈಗ ಇದು ನಮ್ಮ ಮುಂದಿದೆ. ಸರ್ಕಾರದ ಪರವಾಗಿ ಈ ಅನುಮೋದನೆಯನ್ನು ಪೂರ್ಣವಾಗಿ ಬೆಂಬಲಿಸುತ್ತೇನೆ. ಜನಾಭಿಪ್ರಾಯಕ್ಕೆ ಮಣಿದಂ ಕೇಂದ್ರ ಸರ್ಕಾರ ತಂದ ಈ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ, ನಮ್ಮ ಯುವಕರು ವಿದ್ಯಾವಂತರಾಗಿದ್ದಾರೆ, ಅವರಿಗೆ ವೋಟಿನ ಹಕ್ಕನ್ನು ಕೊಡುವುದು ಸಾಧುವಾದುದೇ.

ಶ್ರೀ ಆರ್. ರಾಮಯ್ಯ.—ಅದರಲ್ಲಿ ಎಷ್ಟು ಜನ ಉದ್ಯೋಗಿಗಳಾಗಿದ್ದಾರೆ ಹೇಳಿ.

ಶ್ರೀ ಲಕ್ಷ್ಮೀಸಾಗರ್, ಎ.—ವಿದ್ಯೆ ಕಲಿತವರಿಗೆ ಮಾತ್ರ ವೋಟ್ ಹಾಕುವ ಹಕ್ಕಿರಬೇಕೆಂದು ಹೇಳುವುದು ತಪ್ಪು ಅಭಿಪ್ರಾಯವಾಗುತ್ತದೆ. ಈ ದೇಶದಲ್ಲಿ ವಿದ್ಯೆ ಇಲ್ಲದವರಿಗೆ ವೋಟ್ ಹಾಕುವ ಅಧಿಕಾರ ಇರಬಾರದು ಎಂಬ ಮನೋಭಾವದ ಜನ ಇದ್ದರು, ಆದರೆ ರಾಜ್ಯಾಂಗ ಕರ್ತೃಗಳು ವಯಸ್ಸಾದ ಎಲ್ಲರಿಗೂ ವೋಟ್ ಚಲಾಯಿಸುವ ಹಕ್ಕು ಇರಬೇಕೆಂದು ಆ ವಾದವನ್ನು ತಿರಸ್ಕರಿಸಿದ್ದಾರೆ.

೨-೩೦ ಪಿ.ಎಂ.

ಈ ಬಗ್ಗೆ ಪ್ರಸ್ತಾವಿಕವಾಗಿ ನಾನಂ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಯುವಕರೂ ಕೂಡ ಪ್ರಬುದ್ಧರಾಗಿದ್ದಾರೆ ಅವರಿಗೂ ಕೂಡ ರಾಜಕೀಯ ಪ್ರಜ್ಞೆ ಇದೆ, ಅವರಿಗೆ ೧೮ ವರ್ಷ ವಯಸ್ಸಾದರೆ ನಮ್ಮ ಎಲ್ಲಾ ಕಾನೂನಿನ ಪ್ರಕಾರ ಸ್ವಂತ ಜವಾಬ್ದಾರಿಯಿಂದ ನಿರ್ಣಯ ತೆಗೆದುಕೊಳ್ಳುತಕ್ಕಂತಹ ಶಕ್ತಿ ಇದೆ ಎಂದು ೧೮೭೫ನೇ ಮೆಜಾರಿಟಿ ಆಕ್ಟ್‌ನಲ್ಲಿ ಇದೆ. ಇದು ನಮ್ಮ ದೇಶದಲ್ಲಿ ಈಗಾಗಲೇ ಜಾರಿಯಲ್ಲಿದೆ ಆದರೆ ಓಟಿನ ಹಕ್ಕನ್ನು ಮಾತ್ರ ಅವನಿಗೆ ಕೊಟ್ಟಿರಲಿಲ್ಲ. ಇದು ಸರಿಯಾದುದಲ್ಲವೆಂದು ತಡವಾಗಿಯಾದರೂ ಮನವರಿಕೆಯಾಗಿದೆ. ಅವನಿಗೆ ಬುದ್ಧಿವಂತಿಕೆ ಇದೆ ರಾಜಕೀಯ ಪ್ರಜ್ಞೆ ಇದೆ ಎಂದು ನಮ್ಮ ರಾಜ್ಯದಲ್ಲೂ ಕೂಡ ಇದನ್ನು ಮಾಡಿದ್ದೇವೆ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ಮಾಡುವಾಗ ಕಾನೂನಿನಲ್ಲಿ ತಿದ್ದುಪಡಿ ಮಾಡಿ ಎಲ್ಲಿ ನಮಗೆ ಕಾನೂನನ್ನು ತಿದ್ದುಪಡಿ ಮಾಡಲು ಬಲ ಇದೆ ಅಲ್ಲಿ ಮಾಡಿ ಅವರಿಗೆ ಓಟಿನ ಅಧಿಕಾರವನ್ನು ಕೊಟ್ಟಿದ್ದೇವೆ. ೨-೩ ಚುನಾವಣೆಗಳಲ್ಲಿ ಪಾಲ್ಗೊಂಡ ನಮ್ಮ ಯುವ ಜನಾಂಗ ತಮ್ಮ ಮತವನ್ನು ಚಲಾಯಿಸಿ ತಮ್ಮ ಪ್ರಬುದ್ಧತೆಯನ್ನು ತೋರಿಸಿಕೊಂಡಿದ್ದಾರೆ. ಈ ರೀತಿ ಮಾಡತಕ್ಕಂಥಾದ್ದು ಸ್ವಾಗತಾರ್ಹ. ಈ ಸಮಯದಲ್ಲಿ ನಾನು ಮತ್ತೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಿನಾಂಕ ೧-೪-೮೮ ಹೊತ್ತಿಗೆ ಯಾರಿಗೆ ೧೮ ವರ್ಷವಾಗಿದೆ ಅಥವಾ ಅದಕ್ಕೆಂತ ಜಾಸ್ತಿಯಾಗಿದೆ. ಅವರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಅವರು ಇದಕ್ಕೆ